# 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು.

Spl.C.26/2020

C.W.3
P.W. 3

<u>ದಿನಾಂಕಃ 19-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

| | |
|---|---|
| ಹೆಸರು | ಃ ನಾಗಮ್ಮ |
| ಗಂಡನ ಹೆಸರು | ಃ ಗಿರಿಯಪ್ಪ |
| ವಯಸ್ಸು | ಃ 40 ವರ್ಷ |
| ಉದ್ಯೋಗ | ಃ ಗೃಹಿಣಿ |
| ವಾಸ | ಃ ಸಿಂಗದ ಹಳ್ಳಿ |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

ನನಗೆ ಚಾಸಾ-1,2,4,5 ರವರ ಪರಿಚಯವಿದೆ . ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ಸಹ ಗೊತ್ತು. ಚಾಸಾ-1 ಮತ್ತು 2 ಹಾಗೂ ನಾನು ಮಾದಿಗ ಜಾತಿಗೆ ಸೇರಿದವರು. ಆರೋಪಿಗಳು ವಕ್ಕಲಿಗ ಜಾತಿಗೆ ಸೇರಿದವರು.

2) ಈಗ 5-6 ವರ್ಷಗಳ ಹಿಂದೆ 24 ನೇ ತಾರೀಖಿನ ಶನಿವಾರದಂದು ಮಧ್ಯಾಹ್ನ 3 ಗಂಟೆ ಸಮಯದಲ್ಲಿ ಸಿಂಗದಹಳ್ಳಿಯಲ್ಲಿರುವ ನಮ್ಮ ತೋಟದ ಹತ್ತಿರ ಹೋಗುತ್ತಿದ್ದೆ. ತೋಟಕ್ಕೆ ಹೋಗುತ್ತಿರುವ ಸಮಯದಲ್ಲಿ 1 ನೇ ಆರೋಪಿಯು ಚಾಸಾ-1 ರವರಿಗೆ ಮಾದಿಗ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಜಾತಿನಿಂದನೆ

ಮಾಡಿ ಉಮಾದೇವಿಯವರ ಕೆನ್ನೆಗೆ ಕೈಯಿಂದ ಹೊಡೆದಿರುತ್ತಾರೆ, ನನ್ನ ತೋಟದ ಒಳಗೆ ಏಕೆ ಬಂದಿದ್ದೀಯಾ ಎಂದು ಕೇಳಿದರು. 2 ನೇ ಆರೋಪಿ ಚಾಸಾ-1 ರವರಿಗೆ ಎದೆಗೆ ಹೊಡೆದು, ನೈಟಿಯನ್ನು ಹರಿದು ಹಾಕಿ ಮಾದಿಗ ಮುಂಡೆಯನ್ನು ರೇಪ್ ಮಾಡಿ ಊತಿಹಾಕಬೇಕೆಂದು ಗಂಗಣ್ಣರವರು ಹೇಳುತ್ತಿದ್ದರು. 3 ನೇ ಆರೋಪಿಯು ಸಾವಿತ್ರಮ್ಮಳಿಗೆ ಜುಟ್ಟು ಹಿಡಿದು ಎಳೆದಾಡಿ ಕಾಲಿನಿಂದ ಒದ್ದು ಮಾದಿಗ ಮುಂಡೆ ನಮ್ಮ ತೋಟದ ಬಳಿ ಏಕೆ ಬಂದಿದ್ದೀರ ಎಂದು ಬೈದಿರುತ್ತಾರೆ . 4 ನೇ ಆರೋಪಿ ಅಂಜನಪ್ಪ ರವರು ಚಾಸಾ-2 ರವರಿಗೆ ಅಲ್ಲಿಯೇ ಬಿದ್ದಿದ್ದ ಒಂದು ದೊಣ್ಣೆಯಿಂದ ಬೆನ್ನಿಗೆ ಹೊಡೆದಿರುತ್ತಾರೆ. ಸದರಿ ತೋಟದಲ್ಲಿ ಅಡಿಕೆ ಗಿಡಗಳು ಇದ್ದವು. ನ್ಯಾಯಾಲಯದ ಮುಂದೆ ಇರುವ ದೊಣ್ಣೆಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು ಮಾ-1 ಎಂದು ಗುರುತಿಸಲಾಗಿದೆ. ಚಾಸಾ-1 ರವರು ಘಟನೆಯ ಸಮಯದಲ್ಲಿ ಧರಿಸಿದ್ದ ನೈಟಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ಮು ಮಾ-2 ಎಂದು ಗುರುತಿಸಲಾಗಿದೆ.

( ಈ ಸಾಕ್ಷಿಯು ಈಃ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ಭಾಗಶಃ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೇಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ

ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲು ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-</u>

ನನ್ನ ತವರು ಮನೆ ಗುಬ್ಬಿ ತಾಲ್ಲೂಕು ಅಣ್ಣನಹಳ್ಳಿ ಅಂದರೆ ಸರಿ. ನನಗೆ ಇಬ್ಬರು ಮಕ್ಕಳು ಅವರುಗಳೆಂದರೆ ಭೂಮಿಕ , ಕೆಂಗಲ್ ಹನುಮಂತ ಅಂದರೆ ಸರಿ. ನನ್ನ ಮಾವ ಸಣ್ಣ ತಿಮ್ಮಯ್ಯ ಇವರ ಹೆಸರಿಲ್ಲಿ sy.24/1f ರ ಜಮೀನು ಇರುತ್ತದೆ ಅಂದರೆ ಸರಿ. ಸದರಿ ಜಮೀನಿನಲ್ಲಿ ಅಡಿಕೆ ಬೆಳೆದಿರುತ್ತಾರೆ ಅಂದರೆ ಸರಿ. ಸದರಿ ಜಮೀನಿನ ಹಕ್ಕು ಮತ್ತು ಸ್ವಾಧೀನ ನಮ್ಮದೇ ಇರುತ್ತದೆ ಅಂದರೆ ಸರಿ. ಆರೋಪಿಗಳಿಗೂ ಮತ್ತು ನಮಗೂ ಸದರಿ ಜಮೀನಿನ ಸ್ವಾಧೀನದ ವಿಚಾರದಲ್ಲಿ ವೈಷಮ್ಯವಿತ್ತು ಅಂದರೆ ಸರಿ. ದಿ 12-10-19 ರಂದು ಸದರಿ ಗಲಾಟೆ ಜರೂಗಿತು ಅಂದರೆ ಸರಿ. ಚಾಸಾ-2 ರವರಿಗೆ ಕಾಲಿನಿಂದ ಒದ್ದು , ಕೈಗಳಿಂದ ಕುತ್ತಿಗೆಗೆ ಗುದ್ದಿ ಮಾದಿಗ ಮುಂಡೆ ಎಂದು 3 ನೇ ಆರೋಪಿಯು ಬೈದು ತಲೆಯ ಜುಟ್ಟು ಹಿಡಿದು ಎಳೆದಾಡಿದನು ಅಂದರೆ ಸರಿ. 4 ನೇ ಆರೋಪಿಯು ಮಡಿವಾಳ ಜಾತಿಗೆ ಸೇರಿದವನು ಅಂದರೆ ಸರಿ. 4 ನೇ ಆರೋಪಿಯು ಸಾವಿತ್ರಮ್ಮಳಿಗೆ ದೊಣ್ಣೆಯಿಂದ ಬೆನ್ನಿಗೆ ಹೊಡೆದನು ಅಂದರೆ ಸರಿ. ಶಂಕರಮ್ಮ ಮತ್ತು ಮೋಹನ ಗಲಾಟೆಯನ್ನು ನೋಡಿ ಬಿಡಿಸಿದರು ಅಂದರೆ ಸರಿ. ಮು ಮಾ-1 ನ್ನು ಘಟನಾ ಸ್ಥಳದಲ್ಲಿಯೇ ಆರೋಪಿಗಳು ಬಿಸಾಡಿ ಹೋಗಿದ್ದರು ಅಂದರೆ ಸರಿ. ಮೋಹನ ಅಂಬ್ಯೂಲನ್ಸ್ ನಲ್ಲಿ ಚಾಸಾ-1 ಮತ್ತು 2 ರವರು ಚಿಕ್ಕನಾಯಕನಹಳ್ಳಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು

ಹೋಗಿ ಚಿಕಿತ್ಸೆ ಕೊಡಿಸಿರುತ್ತಾರೆ ಅಂದರೆ ಸರಿ. ನನ್ನ ಗಂಡ ಗಿರಿಯಪ್ಪ ರವರು ಸಹ ಆಸ್ಪತ್ರೆಗೆ ಬಂದು ಚಾಸಾ-1 ಮತ್ತು 2 ರವರಿಗೆ ಚಿಕಿತ್ಸೆಯನ್ನು ಕೊಡಿಸಿರುತ್ತಾರೆ ಅಂದರೆ ಸರಿ. ಈ ಘಟನೆಯಬಗ್ಗೆ ಚಾಸಾ-1 ರವರು ದೂರು ಸಲ್ಲಿಸಿದ ವಿಚಾರ ನನಗೆ ತಿಳಿದಿರುತ್ತದೆ. ಪೊಲೀಸರು ನನ್ನ ಹೇಳಿಕೆಯನ್ನು ವಿಡಿಯೋ ಮಾಡಿಕೊಂಡಿರುತ್ತಾರೆ ಅಂದರೆ ಸರಿ.

<u>ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎನ್ ಬಿ ವಕೀಲರಿಂದಃ</u>

ಆರೋಪಿಗಳ ಪರ ಕಲಂ 231 ಸಿ ಆರ್ ಪಿಸಿ ಅಡಿಯ ಅರ್ಜಿ ಪುರಸ್ಕರಿಸಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.

- ಮರುವಿಚಾರಣೆ ಇಲ್ಲ-

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

**3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತುಮಕೂರು**